**<u>4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು</u>**

**ಸಿಸಿ ನಂ. 25167/2018 ಚಾಸಾಃ 4 ಪ್ರಾಸಾಃ 3**

| | | |
|---|---|---|
| ಸಾಕ್ಷಿದಾರರ ಹೆಸರು | : | ಗಂಗಾಧರಯ್ಯ |
| ತಂದೆಯ ಹೆಸರು | : | ಪುಟ್ಟಯ್ಯ |
| ವಯಸ್ಸು | : | 72 ವರ್ಷ |
| ವೃತ್ತಿ | : | ನಿವೃತ್ತ ಸರ್ಕಾರಿ ನೌಕರರು |
| ವಾಸ | : | ಮಹಾಲಕ್ಷ್ಮಿಲೇಔಟ್, ಬೆಂಗಳೂರು |

**<u>ಸಾಕ್ಷಿಯನ್ನು ದಿಃ 04.03.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಮುಖ್ಯವಿಚಾರಣೆ: ಪ್ರಾಜ್ಞಾ ಹಿ.ಸ.ಸ.ಅ ರವರಿಂದಃ-</u>**

ನಾನು ಕರ್ನಾಟಕ ಅರ್ಬನ್ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿ ಲಿ. ರಾಜಾಜಿನಗರದಲ್ಲಿರುವ ಕಚೇರಿಯಲ್ಲಿ ಸದಸ್ಯನಾಗಿರುತ್ತೇನೆ. ಆರೋಪಿಯು ಸದರಿ ಸೊಸೈಟಿಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು. ಆರೋಪಿಯು ತನ್ನ ಅಧಿಕಾರಿಯ ಅವಧಿಯಲ್ಲಿ ಸೊಸೈಟಿಯ ನಿಯಮಗಳನ್ನು ಪಾಲನೆ ಮಾಡದೇ ಸದಸ್ಯರುಗಳನ್ನು ನೊಂದಣಿ ಮಾಡಿಕೊಂಡಿದ್ದರು. ಆರೋಪಿ ಅಕ್ರಮದ ಬಗ್ಗೆ ಚಾಸಾ-1 ರವರು ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದರು. ಈ ಸಂಬಂಧ ಆರೋಪಿಯನ್ನು ಪೊಲೀಸರು ಬಂಧಿಸಿದ್ದರು.

ದಿನಾಂಕಃ29.04.2018 ರಂದು ಪೊಲೀಸರು ನನ್ನನ್ನು ಕರೆಸಿದ್ದರು. ಪೊಲೀಸರು ಆರೋಪಿಯ ಚಿಕ್ಕಮ್ಮನ ಮನೆಯಲ್ಲಿ ದಾಖಲಾತಿಗಳನ್ನು ಇಟ್ಟಿದ್ದು ಅದನ್ನು ಜಪ್ತಿ ಮಾಡಲು ಪಂಚ ಸಾಕ್ಷಿಯಾಗುವಂತೆ ಕೋರಿರುತ್ತಾರೆ. ಆ ದಿನ ಆರೋಪಿಯು ನಮ್ಮನ್ನು ಚೋಳೂರು ಪಾಳ್ಯ, 17ನೇ ಕ್ರಾಸ್, ಮನೆ ನಂ.78ಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಒಂದು ರೂಮಿನಲ್ಲಿ ಇಟ್ಟಿದ್ದ ಒಂದು ಪ್ಲಾಸ್ಟಿಕ್ ಕವರ್ ನಲ್ಲಿ ಗಂಟು ಹಾಕಿದ್ದ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ. ಸದರಿ ಗಂಟನ್ನು

ತೆಗೆದು ನೋಡಿದಾಗ ಅದರಲ್ಲಿ ದರಕಾಸ್ತು ಅರ್ಜಿಯ ಪುಸ್ತಕಗಳು ಇದ್ದವು. ಒಟ್ಟು 05 ಪುಸ್ತಕಗಳು ಇದ್ದು ಅವುಗಳನ್ನು ತೆರೆದು ನೋಡಿದಾಗ ಕ್ರ.ಸಂ.342 ರಿಂದ 900 ಪುಟಗಳು ಇದ್ದವು. ಸದರಿ 05 ಪುಸ್ತಕಗಳನ್ನು ಸಾಕ್ಷಿದಾರರು ನೋಡಿ ಗುರ್ತಿಸಿದ್ದು ಅವುಗಳನ್ನು ನಿಪಿ-55 ರಿಂದ 59 ಎಂದು ಗುರ್ತಿಸಲಾಯಿತು. ಮುಂದುವರೆದು ಸೊಸೈಟಿಯ ಸದಸ್ಯರ ಶೇರು ಮತ್ತು ಡಿವೆಡೆಂಟ್ ಲೆಡ್ಜರ್ ನ ಪುಟ ಸಂ.1 ರಿಂದ 253 ಪುಟಗಳು ಇರುವ ಒಂದು ಲೆಡ್ಜರ್ ಪುಸ್ತಕವನ್ನು ಜಪ್ತಿ ಮಾಡಲಾಗಿರುತ್ತದೆ. ಸದರಿ ಪುಸ್ತಕವನ್ನು ಸಾಕ್ಷಿದಾರರು ನೋಡಿ ಗುರ್ತಿಸಿದ್ದು ಅದನ್ನು ನಿಪಿ-60 ಎಂದು ಗುರ್ತಿಸಲಾಯಿತು. ಈ ಎಲ್ಲ ಪುಸ್ತಕಗಳನ್ನು ನನ್ನ ಸಮಕ್ಷಮ ಪೊಲೀಸರು ಪಂಚನಾಮೆ ಬರೆದು ತಮ್ಮ ವಶಕ್ಕೆ ತೆಗೆದುಕೊಂಡಿರುತ್ತಾರೆ. ಪಂಚನಾಮೆ ಮತ್ತು ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿದಾರರು ನೋಡಿ ಗುರ್ತಿಸಿದ್ದು ಅದನ್ನು ನಿಪಿ-61 ಹಾಗೂ ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-61ಎ ಎಂದು ಗುರ್ತಿಸಲಾಯಿತು. ಈ ಸಂಬಂಧ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ**ಃ ಪಾಟೀ ಸವಾಲು ಮಾಡಲು ಸಮಯವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**